**ಪ್ರಧಾನ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಸಿ.ಸಿ. 42/2024**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿಡಬ್ಲ್ಯೂ 6**

**ದಿನಾಂಕಃ** 01.07.2026 **ಸಿಡಬ್ಲ್ಯೂ 7**

| | |
|---|---|
| ಹೆಸರು | ಶ್ರೀಮತಿ ವಿಜಯಲಕ್ಷ್ಮಿ |
| ಗಂಡನ ಹೆಸರು | ಬಸವರಾಜ ಪಿಳ್ಳೆ |
| ವಯಸ್ಸು | 59 ವರ್ಷ |
| ಉದ್ಯೋಗ | ಮನೆಗೆಲಸ |
| ವಾಸ ಸ್ಥಳ | ಲಕ್ಷ್ಮೇಶ್ವರ |

**ಮುಖ್ಯ ವಿಚಾರಣೆಃ** ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ದಿಃ 01.07.2023 ರಂದು ಬೆಳಗ್ಗೆ 7 ಗಂಟೆಗೆ ಲಕ್ಷ್ಮೇಶ್ವರದಿಂದ ಶಿವಮೊಗ್ಗಕ್ಕೆ ಸತ್ಸಂಗಕ್ಕೆ ಹೋಗಿರುತ್ತೇವೆ. ಮರಳಿ ದಿಃ03.07.2023 ರಂದು ಶಿವಮೊಗ್ಗದಿಂದ ಲಕ್ಷ್ಮೇಶ್ವರಕ್ಕೆ ಬಸ್ ಸಂ.ಕೆಎ-09 ಎಫ್-5465 ರಲ್ಲಿ ಬರುತ್ತಿರುವಾಗ ನಾವು ಮಲಗಿಕೊಂಡಿದ್ದೆವು, ಹರಿಹರ ಹತ್ತಿರ ಅಪಘಾತವಾಗಿರುತ್ತದೆ, ನಾವು ಎದ್ದು ನೋಡಿದಾಗ ನನ್ನ ಮೂಗು ಮತ್ತು ಕಣ್ಣು, ಬಲಗೈಗೆ ಗಾಯಗಳಾಗಿರುತ್ತವೆ. ನನ್ನ ಜೊತೆ ಚಾಸಾ.5, 6 ರವರು ಬಂದಿದ್ದು ಅವರಿಗೂ ಸಹ ಸಣ್ಣ ಪುಟ್ಟ ಗಾಯಗಳಾಗಿರುತ್ತವೆ. ನಂತರ ನಮ್ಮನ್ನು ಹರಿಹರ ಆಸ್ಪತ್ರೆಗೆ ದಾಖಲಿಸಿರುತ್ತಾರೆ. ನಂತರ ಲಕ್ಷ್ಮೇಶ್ವರಕ್ಕೆ ಹೋಗಿರುತ್ತೇವೆ. ಬಸ್ ನ ಚಾಲಕನ ಹೆಸರು ಬಸನಗೌಡ ಎಂದು ಇರುತ್ತದೆ. ಬಸ್ಸಿನ ಚಾಲಕ ಯಾರೆಂದು ನನಗೆ ಗೊತ್ತಿರುವುದಿಲ್ಲ. ಆತನನ್ನು ನೋಡಿದರೆ ನನಗೆ ಗುರುತಿಸಲಾಗುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಮಾನ್ಯ ಎಪಿಪಿ ಯವರು ಕೋರಿದ್ದು, ಸಂಗತಿಗಳನ್ನು ಪರಿಶೀಲಿಸಲಾಗಿ ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅವರಿಗೆ ಪಾಟೀಸವಾಲು ಮಾಡಲು ಅನುಮತಿಸಲಾಯಿತು)

**ಪಾಟೀ ಸವಾಲುಃ ಸಸಅ ರವರಿಂದಃ**

ನಾವು ಆ ದಿನ ಹೊನ್ನಾಳಿ ಮಾರ್ಗವಾಗಿ ಹೋಗುತ್ತಿರುವಾಗ ಹರಿಹರ ಶಿವಮೊಗ್ಗ ರಸ್ತೆ ಹನಿ ಗಾರ್ಡನ್ ಡಾಬಾ ಹೋಟೆಲ್ ಮುಂಭಾಗ ಬಸ್ ಚಾಲಕನು ಅತೀವಾಗ ಮತ್ತು ಅಜಾಗರೂಕತೆಯಿಂದ ಬಸ್ ಚಲಾಯಿಸಿಕೊಂಡು ಬಂದು ಆತನ ಎದುರುಗಡೆ ಲಾರಿ ಚಾಲಕನೂ ಸಹ ಅತೀವಾಗ ಮತ್ತು ಅಜಾಗರೂಕತೆಯಿಂದ ಲಾರಿ ಚಲಾಯಿಸಿಕೊಂಡು ಬಂದು ಎದುರು ಬದುರು ಡಿಕ್ಕಿಯಾಗಿರುತ್ತದೆ ಎಂದರೆ ಸರಿ. ಚಾಸಾ.6 ರವರಿಗೆ ಬಾಯಿಗೆ ಮುಖಕ್ಕೆ ಪೆಟ್ಟು ಬಿದ್ದು, ನನಗೆ ಬಲಗಣ್ಣಿನ ಮೂಗಿಗೆ ಪೆಟ್ಟಾಗಿ ರಕ್ತಗಾಯವಾಗಿರುತ್ತದೆ ಎಂದರೆ ಸರಿ. ಬಸ್ ನ ನಂ. ನೋಡಲಾಗಿ ಕೆಎ-09 ಎಫ್ 5465 ಲಾರಿಯ ಸಂ.ಕೆಎ-14 ಎ-8673 ಇದ್ದು ಲಾರಿ ಚಾಲಕನ ಹೆಸರು ಮೊಹಮದ್ ಖಾನ್, ಮಲೆಬೆನ್ನೂರು ಅಂತ

ಇತ್ತು ಎಂದರೆ ಸಾಕ್ಷಿಯು ಇರಬಹುದು ಎಂದು ಉತ್ತರಿಸುತ್ತಾರೆ. ಈ ಕುರಿತು ನಾನು ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

**ಪಾಟೀ ಸವಾಲುಃ** ಆರೋಪಿತರ ಶ್ರೀ ಎ ವಿ ಎಂ ವಕೀಲರಿಂದಃ

ನಾನು ದಿಃ03.07.2023 ರಂದು ಪೋಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ. ನಾನು ಯಾವುದೇ ಹೇಳಿಕೆ ನೀಡಿರುವುದಿಲ್ಲ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಬಸ್ ನಲ್ಲಿ ಮಲಗಿಕೊಂಡಿದ್ದರಿಂದ ಅಪಘಾತ ಯಾರ ತಪ್ಪಿನಿಂದ ಮತ್ತು ಹೇಗೆ ಆಯಿತು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಅಪಘಾತದಲ್ಲಿ ಚಾಸಾ.6 ರವರಿಗೆ ಹಲ್ಲು ಮುರಿದಿರುತ್ತದೆ ಎಂದು ನಾನು ಪೋಲೀಸರ ಮುಂದೆ ಹೇಳಿರುವುದಿಲ್ಲ ಮೊದಲ ಬಾರಿಗೆ ಹೇಳಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಪೋಲೀಸರ ಮಾತನ್ನು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/-

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಹರಿಹರ